ವುಟ್ಟಿದ ಮಕ್ಕೈಗೇ ಶತ್ರು ಇವ್ನು, ಪಾಪಿ ನನ್ಮಗ ಎಂದು ಮನಸ್ನಲ್ಲೆ ಬೋದುಕೊಂಡು ಬಿದ್ಕಂಡರು.

ಗಂಡಿನ್ಕಡೆಯವ್ರಿಗೆ ಸುದ್ದಿ ಮುಟ್ಟಿದ ಕೂಡಲೆ ಜನ ಕರ್‍ಕೊಂಡು ಬಂದೇ ಬಿಟ್ರು. ಊರಲ್ಲೆ ಪಂಚಾಯ್ತಿ ಮಾಡೋದು ಅಂತ ಆಯಿತು. ಹೆಣ್ಣಿನ ಕಡೆಯವ್ರು ಸೇರ್‍ಕೊಂಡರು. ಸಣ್ಣಿನೂ ಬಂದ್ಲು. "ಮದ್ವೆ ಯಾಕವ್ವ ಬ್ಯಾಡಾ ಅಂತಿದೀಯಾ, ಇಟೋದು ಮುಂದೆ ಬಂದಮ್ಯಾಕೆ ಅಂಗೆಲ್ಲ ಬ್ಯಾಡಾ ಅನ್ನಬಾರದವ್ವ" ಅಂತ ಅಲ್ಲಿದ್ದ ಇರೀರು ಸಣ್ಣಿನಾ ನೇರ್‍ವಾಗೆ ಕೇಳಿದ್ರು. "ನಾ ಮಾಡ್ತಾ ಇರೂದು ತೆಪ್ಪೇ ಅಯ್ಯೋರೇ. ಆದ್ರೆ ಈ ವಯ್ಯನ್ನ ಮದಿಮಾಡ್ಕೊಳ್ಳೊಕೆ ನಂಗೆ ಇಷ್ಟ ಇಲ್ಲ ಕಣಣ್ಣ. ಮದ್ವಿ ಮಾಡ್ಕೊಂಡು ಆಮೇಕೆ ಬಿಟ್ಟು ವೊಂಟೋದ್ರೆ ಆ ವಯ್ಯಂಗೂ ಕಷ್ಟ, ನಂಗೂ ಕಷ್ಟ. ಅದ್ಕೆ ಈಗ್ಲೆ ಬ್ಯಾಡಾ ಅಂತ ಇರೋದು" ಅಂತ ಸಣ್ಣಿನೂ ನೇರ್‍ವಾಗೆ ಯೋಳಿಬುಟ್ಟಳು. ಯಾರೆಷ್ಟೆ ಯೋಳಿದ್ರೂ ಸಣ್ಣಿ ಒಪ್ಪಲೆ ಇಲ್ಲ. ಕೊನೆಗೆ ಸಣ್ಣಿ ಮನೆಯವ್ರು ಗಂಡಿನ ಕಡ್ಯೆವ್ರಿಗೆ ಅವ್ರು ಮಾಡ್ದ ಖರ್ಚನ್ನ ವಾಪಸ್ಸು ಮಾಡ್ಬೇಕು ಅಂತ ಪಂಚಾಯ್ತಿಯಲ್ಲಿ ತೀರ್ಪು ಕೊಟ್ಟರು. ಇರೋ ಮನೆನಾ ಮಾರಿ ಹಣ ಕೊಡ್ತಿನಿ ಅಂತ ಈರಾ ಒಪ್ಕಂಡ. ಕೆಂಪಿ, ಈರಭದ್ರ, ವೆಂಕಟ ಕೂಗಾಡಿ ಹಾರಾಡಿದ್ರು ಈರಾ ಸೊಪ್ಪ ಹಾಕಲಿಲ್ಲ. ಅವ್ವ ಮಕ್ಕಳು ಒಂದಾದ್ರೂ ಏನೂ ಮಾಡಲಾಗಲಿಲ್ಲ, ವಂದಿಷ್ಟು ಅಪ್ಪನಮ್ಯಾಲೂ, ತಂಗಿ ಮ್ಯಾಲೂ ಎಗರಾಡಿ ಒದರಾಡಿ ಬಂದವ್ರ ಮುಂದೆಲ್ಲ ಅವ್ರಾರ ಆಡಿ ಹಿರೀಕರೆಲ್ಲ ಬೋದ ಮ್ಯಾಕೆ ವಯ ವಯ ಅಂದ್ಕೊಂಡು ತಿಕ ಮುಚ್ಕಂಡು ಸುಮ್ಮನಾದ್ರು.

ಮಗ್ಳ ಮದ್ವೆ ನಿಲ್ಲಿಸಿದ ಮ್ಯಾಕೆ ಈರಾ ಸುಮ್ಕೆ ಕುಂತ್ಕಳ್ಳಿಲ್ಲ.ಆದಷ್ಟು ಬಿರ್‍ರನೆ ಮಗ್ಳ ಮದ್ವೆ ಮಾಡಿ ಮುಗಿಸ್ಲೆ ಬೇಕು ಅಂತ ಕಾಲಿಗೆ ಚಕ್ರ ಕಟ್ಕೊಂಡವ್ನಂತೆ ಓಡಾಡಿ ಒಂದು ವೈನಾಗಿರೊ ಗಂಡ್ನ ಉಡುಕೆ ಬುಟ್ಟ. ವರ ಬಡ್ವ ಆಗಿದ್ರೂ, ವಳ್ಳೆನೂ ಅಂತ ನಾಕ ಕಡೆ ವಿಚಾರ್‍ಸಿ ಕಂಡ ಮ್ಯಾಕೆ ಮಗ್ಳಿಗೆ ಮದ್ವೆ ಗೊತ್ಮಾಡ್ದ. ಮನೆ ಮಾರ್‍ದ ಹಣ ಇತ್ತು, ಶಿವ ಅಂತ ಮದ್ವೆ ಮಾಡೇ ಬುಟ್ಟಾ. ಮದ್ವೆ ಮುಗ್ಸಕಂಡು ಸಣ್ಣಿ ಗಂಡನ್ಜೊತೆ ವೋಂಟು ನಿಂತಾಗ ಕಳ್ಳೆ ಕಿತ್ತು ಬಂದಂಗಾತು ಈರಂಗೆ. ಆದ್ರು ಮಗ್ಳು ವೈನಾಗಿರ್‍ತಳೆ ಅಂತ ನೆನ್ಸಿಕೊಂಡೇ ಎದಿಯೋಳ್ಗಿನ ದುಕ್ಕ ಮರೆ ಮಾಡ್ಕಂಡು ಮಗ್ಳನ ಕಳ್ಸಿಕೊಟ್ಟ.

ಸಣ್ಣಿ ಗಂಡನ್ನೈ ಇಡ್ಕೊಂಡು ಅಪ್ಪನ ದುಕ್ಕ ತುಂಬಿದ ಮಕನಾ ನೋಡ್ತಾ ನೋಡ್ತಾ ತಾನೂ ಕಣ್ಣೀರಾಕ್ತಾ ಲಾರಿ ಅತ್ತಿದ್ಲು. ಗಂಡನಾ ಮನೆ ಮುಂದೆ ಬಂದ್ರೂ ಅವಳಿಗೆ ಅಪ್ಪನಾ ಗ್ಯಾನನೇ. ಅವಳು ಲಾರಿ ನಿಂತ್ಕಂಡ್ರೂ ಇಳಿದೆ ಇರೋದನ್ನ ನೋಡಿ ಅವಳ ಅತ್ತೆ "ಏನಮ್ಮಿ ಇಳ್ಯಾಕಿಲ್ವಾ, ಬಿರ್‍ರನೇ ಬಾರಮ್ಮಿ, ನಿನ್ನ ನೋಡೋಕೆ ಅಲ್ನೋಡು ಏಟು ಜನ ಕಾಯ್ತಾ ಅವ್ರೆ, ಇಳ್ದು ಬಾರಮ್ಮಿ" ಅಂತ ಅಲ್ಲಡ್ಸಿದಾಗ ಸುತ್ತಮುತ್ತ ನೋಡ್ತಾ ಲಾರಿಯಿಂದ ಮೆಲ್ಲಕಿಳ್ದು ಗಂಡನ್ಪಕ್ಕಕ್ಕೊಗಿ ನಿಂತ್ಕೊಂಡ್ಲು. ಬಾಗಿಲತ್ರ ಗಂಡು ಹೆಣ್ಣಿಗೆ ಆರ್‍ತಿ ಮಾಡಿ ಒಳಕಿ ಕರ್‍ಕಳ್ಳಕೆ ಅವ್ರ ಕಡೆ ನೆಂಟ್ರು ಒಡಾಡ್ತ ಇದ್ರು. ಅಷ್ಟ್ರೊಳ್ಗೆ ಒಂದು ಗಲಾಟೆ ಸುರು ಹಚ್ಕಳ್ತು. ಯಾವನೊ ಒಬ್ಬ ಸಣ್ಣಿ ಗಂಡನ್ನ ಕೊಳ್ಳ ಪಟ್ಟಿ ಇಡಿದು "ಏನೋಲೊ ನನ್ನ ತಂಗಿನಾ ಬಸ್ರು ಮಾಡಿ ಮಗಿನಾ ಅವ್ಳ ಕೈಗೆ ಕೊಟ್ಟು ಈಗಾ ಮದುವಣ್ಣ ಆಗಿ ಎಣ್ತಿ ಮಗ್ಗಲಿ ನಿಂತ್ಕಂಡಿದ್ದಿಯಾ. ಯಾರ್‍ಲಾ ನನ್ನ ತಂಗಿನಾ ಮದ್ವೆ ಮಾಡ್ಕಂತರೆ" ಏಳ್ವಾಡ್ತ ಇರುವಾಗ್ಲೆ ಎಳೆ ಮಗಿನೆತ್ಕೊಂಡು ಬಂದ ಒಂದು ಹೆಣ್ಣು ತೂರಾಡ್ತಾ ಅವರ ಮದ್ಯೆ ಬಂದು "ಬುಟ್ಟು ಬುಡಣ್ಣ ಅವ್ನ" ಅಣ್ಣನ ದೂರ ತಳ್ಳಿ, ಮದುವಣ್ಣನ ಮುಂದೆ ಬಂದು "ಬಸ್ವ ನನ್ನೆ ಲಗ್ನೆ ಆಗ್ತಿನಂತ ಆಣೆ, ಪ್ರಮಾಣ ಮಾಡಿ ಈಗ ಈಂಗೆ ಮಾಡ್ಬುಟ್ಯಾಲ್ಲ, ಇದು ಸರೀನಾ ಬಸ್ವ, ನನ್ನ ಮರ್‍ತೆ ಬುಟ್ಯಾಲ್ಲ ಬಸ್ವಾ, ಇವೆತ್ತೇಲ್ಲ ನಿಂಗಾಗಿ ಕಾಯ್ತನೆ ಇದ್ದೆ ಬಸ್ವ. ತಾಳಿ ಕಟ್ಟೊ